**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 4069/2023</u>**

ದಿನಾಂಕಃ **24.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಪಾಲಯ್ಯ | ಚಾಸಾ-5, ಪ್ರಾಸ.-5 |
| ತಂದೆಯ ಹೆಸರುಃ | ಪೂಜಾರಪ್ಪ | |
| ವಯಸ್ಸು ಃ | 62 ವರ್ಷ | |
| ಉದ್ಯೋಗ ಃ | ಕೂಲಿ ಕೆಲಸ | |
| ವಾಸ ಃ | ಗೊಲ್ಲರಹಳ್ಳಿ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಮೃತ ವ್ಯಕ್ತಿ ನನಗೆ ಗೊತ್ತಿಲ್ಲ. ಚಾಸಾ-2 ಮತ್ತು 6 ರವರು ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ದಿಃ 20.08.2023 ರ ಪೋಲಿಸ್ ನೋಟಿಸೀನಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ನೋಟಿಸನ್ನು ನಿಪಿ-17 ಎಂದು ಗುರುತಿಸಲಾಯಿತು. ಅದೇ ದಿನದ ಅಮಾನತ್ತು ಮಹಜರ್ ನಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-18 ಎಂದು ಗುರುತಿಸಲಾಯಿತು. ನಿಪಿ-17 ಮತ್ತು 18 ಕ್ಕೆ ಯಾವ ವಿಚಾರವಾಗಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-14 ರಿಂದ 16 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾಚಿತ್ರಗಳನ್ನು ಯಾವ ವಿಚಾರಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 18.08.2023 ರಂದು ಮೃತ ವ್ಯಕ್ತಿಗೆ ಅಪಘಾತವಾಗಿರುವ ವಿಚಾರವಾಗಿ ಚಾಸಾ-1 ರವರು ಪೋಲಿಸರಿಗೆ ದೂರು ನೀಡಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಅಪಘಾತಪಡಿಸಿದ ವಾಹನ ಸಂ ಕೆಎ-66 ಇ-6312 ಮತ್ತು ಕೆಎ-51 ಎಜಿ-0881 ರ ಲಾರಿಯನ್ನು ವಶಪಡಿಸಿಕೊಳ್ಳುವ ಸಲುವಾಗಿ ಪೋಲಿಸರು ನನಗೆ ಮತ್ತು ಚಾಸಾ-6 ರವರಿಗೆ ನಿಪಿ-17 ರಂತೆ ನೋಟಿಸನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನಾಂಕದಂದು ನಾನು ಮತ್ತು ಚಾಸಾ-6 ರವರ ಸಮಕ್ಷಮ ಬೀರೂರು ಪೋಲಿಸ್ ಠಾಣಾ ಆವರಣದಲ್ಲಿ ಚಾಸಾ-2 ರವರು ತೋರಿಸಿದ ವಾಹನಗಳನ್ನು ನನ್ನ ಮತ್ತು ಚಾಸಾ-6 ರವರ ಸಮಕ್ಷಮ ಮಧ್ಯಾಹ್ನ 1.45 ರಿಂದ 2.30 ರವರೆಗೆ ನಿಪಿ-18 ರಂತೆ ಅಮಾನತ್ ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಅದೇ ಸಮಯದಲ್ಲಿ ನಿಪಿ-14 ರಿಂದ 16 ರ ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದ: ಇರುವುದಿಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.